ನಮಗೆ ಗೊತ್ತಾಗುವುದಿಲ್ಲ. ಅವರಿಬ್ಬರೂ ಇಲ್ಲದೇ ಇದ್ದಾಗ ಇವರು ಉತ್ತರ ಕೊಟ್ಟಿದ್ದಾರೆಂದರೆ ನಾನು ಒಪ್ಪಿಕೊಳ್ಳುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇದ್ದರೂ ಕೂಡ, ಬೇರೆ ಮಂತ್ರಿಗಳು ಉತ್ತರ ಕೊಡಬಹುದು ಅವರ ಪ್ರಕಾರ ಇದೂ ನಡೆಯಬಹುದೆಂದಾದರೆ ನಡೆಯಬಹುದು.

ಶ್ರೀ ಹೆಚ್.ಜಿ. ಗೋವಿಂದೇಗೌಡ:– ಇಂದು ಎಷ್ಟು ಜನ ಮಕ್ಕಳು ಶಾಲೆಗೆ ಹೋಗಿದ್ದಾರೆ ಎಷ್ಟು ಜನ ಹೋಗಿಲ್ಲವೆಂಬುದು ಇಂದು ಸಂಜೆ ಮಾಹಿತಿ ಸಿಗುತ್ತದೆ. ಇಂದು ಸಂಜೆ ಆ ಮಾಹಿತಿ ತರಿಸಿಕೊಂಡ ನಂತರ ಏನು ಅನ್ಯಾಯವಾಗಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಂತರ ಅಭಿಪ್ರಾಯ ಹೇಳುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ನಾವಿಬ್ಬರೂ ಜಂಟಿಯಾಗಿ ಉತ್ತರ ಕೊಡಬೇಕೆಂದು ಇಲ್ಲ. ಮಾನ್ಯ ಮುಖ್ಯಮಂತ್ರಿಗಳೇನು ಹೇಳಿದ್ದಾರೆ ಅದು ಸಹಜವಾಗಿದೆ.

ಅಧ್ಯಕ್ಷರು:– ಮಾನ್ಯ ಈಶ್ವರಪ್ಪನವರದ್ದು ಒಂದು ನೋಟೀಸ್ ಇತ್ತು. ನಿಲುವಳಿಸೂಚನೆ ಬೇಡವೆಂದು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಪ್ರಸ್ತಾಪ ಮಾಡುತ್ತಾರೆ, ನಂತರ.....

ವಿಶೇಷ ಅನುಮತಿ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ.

(ಅ) ದೇವಿ ಸಕ್ಕರೆ ಕಾರ್ಖಾನೆ ಮುಚ್ಚಿರುವ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):– ಶಿವಮೊಗ್ಗ ಜಿಲ್ಲೆಯ ಕಾರ್ಮಿಕರು ಮತ್ತು ರೈತರ ಜೀವನಾಡಿಯಾಗಿರತಕ್ಕಂತಹ ದೇವಿ ಸಕ್ಕರೆ ಕಾರ್ಖಾನೆಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ನಾನು ಮತ್ತು ಮಾನ್ಯ ಯಡಿಯೂರಪ್ಪನವರು, ಅರಗ ಜ್ಞಾನೇಂದ್ರ ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡಬೇಕೆಂದು ತಮಗೆ ಕಳಿಸಿದ್ದೇವೆ. ಅದನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶಕೊಡುತ್ತಿದ್ದೀರಿ.....

ಅಧ್ಯಕ್ಷರು:– ನಿಲುವಳಿ ಸೂಚನೆ ಇಲ್ಲ. ವಿಶೇಷ ಅನುಮತಿ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯವೆಂದು ಅವಕಾಶ ಕೊಡುತ್ತಿದ್ದೇನೆ. ರೂಲ್ಸ್ ಏನೂ ಇಲ್ಲ.....

ಶ್ರೀ ಕೆ.ಎಸ್. ಈಶ್ವರಪ್ಪ:– ಆಗಬಹುದು. ಕಳೆದ ಎರಡು ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿದ್ದಂತಹ ದೇವಿ ಸಕ್ಕರೆ ಕಾರ್ಖಾನೆ ನಿಂತುಹೋಗಿದೆ. ಒಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರು, ಸಾವಿರಾರು ಜನ ರೈತರು ಬೀದಿ ಪಾಲಾಗಿದ್ದಾರೆ. ಕಾರ್ಮಿಕರಿಗೆ ಬರಬೇಕಾದ ಸಂಬಳ ಇತರ ಬಾಕಿಯನ್ನು ಕೊಡುತ್ತೇನೆಂದು ಹೇಳಿಕೊಂಡು ಆ ಕಾರ್ಖಾನೆ ಮಾಲೀಕ ಓಡಾಡುತ್ತಿದ್ದಾನೆ. ರೈತರು ಕಬ್ಬನ್ನು ಆ ಕಾರ್ಖಾನೆಗೆ ಹೊಡೆದಿರುತ್ತಾರೆ. ಅದರ ಬಾಕಿಯನ್ನೂ ಕೂಡ ಆ ಕಾರ್ಖಾನೆಯ ಮಾಲೀಕ ಕೊಟ್ಟಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲಿ ಈ ಬಗ್ಗೆ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೇವೆ. ರೈತರಿಗೆ ಮತ್ತು ಕಾರ್ಮಿಕರಿಗೆ ಆ ಮಾಲೀಕ ದ್ರೋಹ ಮಾಡಿದ್ದಾನೆ. ಈ ಮಾಲೀಕನ ಮೇಲೆ ಈಗಾಗಲೇ ಸಾಕಷ್ಟು ವಾರಂಟ್‌ಗಳು ಇವೆ. ಕೋರ್ಟಿನ ವಾರಂಟ್ ಇದೆ. ಆದ್ದರಿಂದ ಇವನನ್ನು ಅರೆಸ್ಟ್ ಮಾಡುವುದರಿಂದ ಭಯ ಹುಟ್ಟುತ್ತದೆ. ಅದರ ಮುಖಾಂತರ ರೈತರಿಗೆ ಕಾರ್ಮಿಕರಿಗೆ, ಅವನು ಹಣವನ್ನು ಕೊಡುತ್ತಾನೆಂದು

ಅನೇಕ ಜನ ಪ್ರಸ್ತಾಪ ಮಾಡುತ್ತಾ ಬಂದಿದ್ದಾರೆ. ಆದರೆ ಆ ಮಾಲೀಕ ಇವತ್ತಿಗೂ ಸರಕಾರದ ಮಾತಿಗಾಗಲೀ, ರೈತರ, ಕಾರ್ಮಿಕರ ಹೋರಾಟಕ್ಕಾಗಲೀ, ಒಂದು ಕವಡೆ ಬೆಲೆಯನ್ನೂ ಕೊಟ್ಟಿಲ್ಲ. ದೇಶದಲ್ಲಿ ರಾಜಾರೋಷವಾಗಿ ಸುತ್ತುತ್ತಿದ್ದಾನೆ. ನನಗೆ ಯಾರೂ ಏನೂ ಮಾಡುವುದಿಲ್ಲವೆಂಬ ಅಭಿಪ್ರಾಯ ಆ ಮಾಲೀಕನಿಗೆ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲಾ ಪಕ್ಷಗಳೂ ಒಟ್ಟಿಗೆ ಸೇರಿ ಸಕ್ಕರೆ ಕಾರ್ಖಾನೆ ಪುನರುಜ್ಜೀವನ ಹೋರಾಟ ಸಮಿತಿಯನ್ನು ನಾವು ನೇಮಕ ಮಾಡಿಕೊಂಡಿದ್ದೇವೆ. ಅದರಲ್ಲಿ ಜನತಾ ದಳದವರು, ಕಾಂಗ್ರೆಸ್, ಬಿಜೆಪಿ ಪಕ್ಷದವರೂ ಇದ್ದಾರೆ. ಚೇಂಬರ್ ಆಫ್ ಕಾಮರ್ಸ್, ರೈತರು ಕಾರ್ಮಿಕರೂ ಕೂಡ ಇದ್ದಾರೆ. ನಾವೆಲ್ಲರೂ ಸೇರಿ ಅನೇಕ ಹೋರಾಟಗಳನ್ನು ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಆ ವ್ಯಕ್ತಿಗೆ ಸರಕಾರದ ಭಯ ಸ್ವಲ್ಪವೂ ಇಲ್ಲ. ಈ ಬಗ್ಗೆ ಅನೇಕ ಹೋರಾಟಗಳು ನಡೆದಿದೆ. ಕಳೆದ ಬಾರಿ ಈ ಬಗ್ಗೆ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಸಕ್ಕರೆ ಸಚಿವರು ಹೇಳಿದರು. 5 ಕೋಟಿ ರೂಪಾಯಿಗಳು ಸಕ್ಕರೆ ಅಲ್ಲಿ ಇದೆ. ಅದು ಹಾಳಾಗಿ ಹೋಗುತ್ತಿದೆ, ಅದನ್ನು ರಿಲೀಸ್ ಮಾಡಿಸುತ್ತೇವೆಂದು ಹೇಳಿದ್ದರು. ಸದ್ಯದಲ್ಲೇ ಸಕ್ಕರೆಯನ್ನು ರಿಲೀಸ್ ಮಾಡುವುದಕ್ಕೆ ಅನುಮತಿ ದೊರೆಯಲಿದೆ. ಅದರಲ್ಲೇನಾದರೂ ತೊಂದರೆಯಾದರೆ ತಾವು ಬನ್ನಿ, ನಾವಿಬ್ಬರೂ ಒಟ್ಟಿಗೆ ಹೋಗಿ ಬರೋಣ. ಒಂದು ತಿಂಗಳಲ್ಲಿ ಸಕ್ಕರೆಗೆ ರಿಲೀಸ್ ತೆಗೆದುಕೊಂಡು, ರೀ ಪ್ರೋಸಸ್ ಮಾಡಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗೋಣ. ಆ ಹಣವನ್ನು ರೈತರಿಗೆ, ಕಾರ್ಮಿಕರಿಗೆ ಕೊಡುವ ಏರ್ಪಾಡು ಮಾಡುತ್ತೇವೆ ಏನ್ನುವ ಈ ಮಾತನ್ನು ವಿಧಾನ ಸಭೆಯಲ್ಲಿ ಮಾನ್ಯ ಸಕ್ಕರೆ ಸಚಿವರು ದಿನಾಂಕ 31-7-97 ರಲ್ಲಿ ಹೇಳಿದ್ದಾರೆ. ಅಂದರೆ ಸಕ್ಕರೆಯನ್ನೂ ರಿಲೀಸ್ ಮಾಡಲಿಲ್ಲ. ಆ ಸಕ್ಕರೆ ಕಾರ್ಖಾನೆಯನ್ನು ಸರಕಾರವೇ ಟೇಕ್ ಓವರ್ ಮಾಡುವುದಕ್ಕೆ ಮಂತ್ರಿಮಂಡಲ ತೀರ್ಮಾನ ಮಾಡಿದೆ, ಆದ್ದರಿಂದ ಕಳೆದ ವಿಧಾನ ಸಭಾಧಿವೇಶನ ಮುಗಿಯುತ್ತಿದ್ದಂತೆ ಟೇಕ್ ಓವರ್ ಮಾಡುವ ದಿಕ್ಕಿನಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಆಶ್ವಾಸನೆ ಕೊಟ್ಟಿದ್ದನ್ನು ನಾವು ಕಂಡಿದ್ದೇವೆ. ನಮ್ಮದೇನು ತಪ್ಪು ಇದೆ, ಕೆ.ಎಸ್.ಆರ್.ಟಿ.ಸಿ ಮುಷ್ಕರ ಮಾಡಿದರೆ ನಾವು ಹೋಗಬೇಕಾ, ಅವರು ಆಟ ಆಡಿದ ಹಾಗೆಲ್ಲಾ ಕುಣಿಯ ಬೇಕಾ, ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇವತ್ತು ಸರಕಾರ ಎಷ್ಟರ ಮಟ್ಟಿಗೆ ಬೇಜವಾಬ್ದಾರಿತನದಿಂದ ವರ್ತನೆ ಮಾಡುತ್ತಿದೆ ಎಂದು ಇದರಿಂದ ಗೊತ್ತಾಗುತ್ತದೆ. ಆ ಸಕ್ಕರೆ ಕಾರ್ಖಾನೆಯ ಮಾಲೀಕನಿಗೆ ಸರಕಾರದ ಬಗ್ಗೆ ಒಂದು ಕವಡೆಯಷ್ಟೂ ಬೆಲೆ ಕೊಡುತ್ತಿಲ್ಲ. ದಿನಾಂಕ 2-10-97 ರಂದು ಮಹಾತ್ಮ ಗಾಂಧೀಜಿಯವರ ಜಯಂತಿಯಂದು ನಾವು ಹೋರಾಟ ಮಾಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಅಂದು ಶಿವಮೊಗ್ಗಕ್ಕೆ ಬಂದು ಕುಡಿಯುವ ನೀರಿನ ಯೋಜನೆ, ಮತ್ತೊಂದನ್ನು ಉದ್ಘಾಟನೆ ಮಾಡುತ್ತೇವೆಂದು ಬಂದಾಗ ಅಂದೂ ಕೂಡ ನೀವು ಇದನ್ನು ಉದ್ಘಾಟನೆ ಮಾಡುವುದಕ್ಕಿಂತ ಮೊದಲು, ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಹೇಳಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಕುಡಿಯುವ ನೀರಿನ ಯೋಜನೆಯನ್ನು ಉದ್ಘಾಟನೆ ಮಾಡಿ ಶಿವಮೊಗ್ಗ ಜಿಲ್ಲೆಯ ಜನರಿಗೆ ನೀರು ಕೊಟ್ಟರೆ ಬಿ.ಜೆ.ಪಿ. ಯವರ ಕಣ್ಣನಲ್ಲೇಕೆ ನೀರು ಎಂದು ಪತ್ರಿಕಾ ಹೇಳಿಕೆ ಕೊಟ್ಟರು. ಒಬ್ಬ ಜನತಾ ದಳದ ಅಧ್ಯಕ್ಷರ ಅವಧಿ ಮುಗಿಯುತ್ತಿತ್ತು. ಅವರ ಅವಧಿಯೊಳಗೇ ಈ

ಯೋಜನೆ ಉದ್ಘಾಟನೆಯಾಗಬೇಕೆಂಬ ಒಂದೇ ಒಂದು ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳ ಹಠ ಮಾಡಿ ಬಂದರು. 45 ದಿವಸದಲ್ಲಿ ನಾನು ಇದನ್ನು ಪರಿಹಾರ ಮಾಡುತ್ತೇನೆಂದು ಹೇಳಿದರು. 5000 ಕಾರ್ಮಿಕರು, ರೈತರು ಬೀದಿ ಪಾಲಾಗಿದ್ದಾರೆ. ಅಲ್ಲಿನ ಮಹಾತ್ಮಾ ಗಾಂಧೀ ಪಾರ್ಕಿನಲ್ಲಿ ಇವತ್ತಿಗೂ ಕೂಡ ಟೆಂಟ್ ಹಾಕಿಕೊಂಡು ಕುಳಿತಿದ್ದಾರೆ. ನೂರಾರು ಜನ ಹೆಣ್ಣು ಮಕ್ಕಳು 6-3-98 ರಂದು ಜಿಲ್ಲಾಧಿಕಾರಿ ಕಚೇರಿಯಿಂದ ಜಿಲ್ಲಾಧಿಕಾರಿಗಳನ್ನು ಬೆಳಗಿನಿಂದ ಸಂಜೆವರೆಗೆ ಹೊರಗಡೆ ಬಿಡಲಿಲ್ಲ. ಆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಮ್ಯಾನೇಜರ್ ಅವರು ಏನು ಸಬ್ಸಿಡಿ ಬಿಡುಗಡೆ ಮಾಡುತ್ತೇವೆ, ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿ ಸತಾಯಿಸುತ್ತಾ ಬಂದಿದ್ದರೋ ಅದನ್ನು ಮಾಡಬೇಕೆಂದು ಹೋರಾಟ ಮಾಡಿ ಬೆಳಗಿನಿಂದ ಸಂಜೆಯವರೆಗೆ ಆ ಸಿಬ್ಬಂದಿಯನ್ನು ಒಳಗೆ ಕೂಡಿ ಹಾಕಿದ್ದೆವು. ಕೊನೆಗೆ ಬೆಂಗಳೂರಿನಲ್ಲಿ ತರಾತುರಿಯಲ್ಲಿ ವಿಶೇಷವಾಗಿ ಸಬೆ ಕರೆದು, ಶಿವಮೊಗ್ಗ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾತ್ರ ಅಜೆಂಡಾ ಇಟ್ಟುಕೊಂಡು ಅಲ್ಲಿ ತೀರ್ಮಾನ ಮಾಡಿ 3 ಕೋಟಿ 38 ಲಕ್ಷ ರೂಪಾಯಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂಬ ಅಂಶವನ್ನು ತಿಳಿಸಿದರು. ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಈ ಸರಕಾರದ ಒತ್ತಾಯಕ್ಕೆ ಆ ಬ್ಯಾಂಕಿನವರೂ ಗಮನ ಕೊಡುವುದಿಲ್ಲ. ರೈತರು, ಕಾರ್ಮಿಕರು ಹೋರಾಟ ಮಾಡಿದ ನಂತರ ಆ ಬ್ಯಾಂಕಿನವರು ಇದಕ್ಕೆ ಗಮನ ಕೊಡುತ್ತಾರೆ. ಬ್ಯಾಂಕಿನವರಿಗೂ ಸರಕಾರದ ಬಗ್ಗೆ ಭಯ ಇಲ್ಲ. ಸಕ್ಕರೆ ಕಾರ್ಖಾನೆ ಮಾಲೀಕನಿಗೂ ಸರಕಾರದ ಬಗ್ಗೆ ಭಯ ಇಲ್ಲ. ಮಾನ್ಯ ಸಕ್ಕರೆ ಮಂತ್ರಿಗಳು ವಿಧಾನ ಸಭೆಯಲ್ಲಿ ಆಶ್ವಾಸನೆ ಕೊಟ್ಟರೂ ಅದಕ್ಕೂ ಬೆಲೆ ಇಲ್ಲ. ನಾವು ಕಳೆದ ಬಾರಿ ಪ್ರಸ್ತಾಪ ಮಾಡಿದಾಗ ಇವರ ಬಗ್ಗೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಿ, ಹಕ್ಕುಚ್ಯುತಿ ಮಂಡನೆ ಮಾಡಿ ಎಂದು ಹೇಳಿದ್ದೆವು. ಶಿವಮೊಗ್ಗ ಜಿಲ್ಲೆಯಲ್ಲಿನ ರೈತರು, ಕಾರ್ಮಿಕರು ಸಾಯುತ್ತಿದ್ದಾರೆ. ಸರಕಾರಕ್ಕೆ ಈಗಾಗಲೇ ಅಂಕಿ ಅಂಶ ಬಂದಿರಬಹುದು. ಕಳೆದ ಎರಡು ವರ್ಷದಿಂದ ಕಾರ್ಮಿಕರಿಗೆ ಸಂಬಳ ಬರದೇ ಇರುವುದರಿಂದ ಅನೇಕ ಕಾರ್ಮಿಕರು ನೇಣು ಹಾಕಿಕೊಂಡು ಸತ್ತಿದ್ದಾರೆ. ಇನ್ನು ಎಷ್ಟು ಜನ ನೇಣು ಹಾಕಿಕೊಂಡು ಸಾಯಬೇಕೋ ನನಗಂತೂ ಗೊತ್ತಿಲ್ಲ. ಕಾರ್ಮಿಕರಿಗೆ, ರೈತರಿಗೆ ಹಣ ಕೊಡುತ್ತಿಲ್ಲ. ನಾವು ಹೋರಾಟ ಮಾಡುತ್ತೇವೆಂದು ಹೇಳಿದ ತಕ್ಷಣ ಮಾನ್ಯ ಮಂತ್ರಿಗಳು ಸಭೆ ಕರೆಯುತ್ತಾರೆ. ಒಂದು ವಾರದಲ್ಲಿ, 15 ದಿವಸದಲ್ಲಿ ಮಾಡುತ್ತೇವೆಂದು ಹೇಳಿಕಳುಹಿಸುತ್ತಾರೆ. ನೀವೇನು ಹಿಂದೆ ಆಶ್ವಾಸನೆ ಕೊಟ್ಟಿದ್ದೀರಿ ಅದರ ಪ್ರಕಾರ, ಅದನ್ನು ಟೇಕ್ ಓವರ್ ಮಾಡುವುದಕ್ಕೇನು ಪ್ರಯತ್ನವನ್ನು ತಾವು ಮಾಡಿದ್ದೀರಿ. ರಾಜರತ್ನಂ ಎಂಬ ಮಾಲೀಕನ ಬಂಧನ ಮಾಡುವುದಕ್ಕೆ ನಿಮ್ಮಲ್ಲಿ ಶಕ್ತಿ ಇದೆಯೋ ಇಲ್ಲವೋ ತಿಳಿಸಿ. ಅನೇಕ ವಾರಂಟ್‌ಗಳು ಇದ್ದರೂ ಏಕೆ ಅವನನ್ನು ಅರೆಸ್ಟ್ ಮಾಡಿಲ್ಲ? ನಿಮಗೆ ಇದನ್ನು ಟೇಕ್ ಓವರ್ ಮಾಡುವುದಕ್ಕಾಗುತ್ತದೆಯೋ ಇಲ್ಲವೋ ತಿಳಿಸಿ. 5 ಕೋಟಿ ರೂಪಾಯಿ ಸಕ್ಕರೆ ಈಗಾಗಲೇ ಹಾಳಾಗುತ್ತಿದೆ. ಬೇರೆ ಬೇರೆ ಇಲಾಖೆಗಳಿಂದ ಇದರ ಬಗ್ಗೆ ತನಿಖೆ ಮಾಡಿದರೆ ಆ ಸಕ್ಕರೆ ಹಾಳಾಗಿರುವುದು ತಿಳಿಯುತ್ತದೆ. ಬರೀ ಉತ್ತರ ತೆಗೆದುಕೊಂಡು ಏನೂ ಮಾಡುವುದಕ್ಕೆ ಬರುವುದಿಲ್ಲ. ಮುಖ್ಯಮಂತ್ರಿಗಳಾಗಿ ಈ ರೀತಿ ಹಗುರವಾಗಿ ಮಾತನಾಡಿ, ಮಾತನಾಡಿ ಕಾರ್ಮಿಕರು, ರೈತರು ಸಾಯುತ್ತಿದ್ದಾರೆ.....

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):– ಮಾನ್ಯ ಸದಸ್ಯರಿಗೇ ಗೊತ್ತಿದೆ. ಈ ಬಗ್ಗೆ 3 ಸಲ ಎಲ್ಲಾ ಪಕ್ಷಗಳ ಧುರೀಣರನ್ನು ಸೇರಿಸಿ ಸಭೆ ಕೂಡ ಮಾಡಿದ್ದೇವೆ. ಇದೊಂದು

ಖಾಸಗಿ ಸಕ್ಕರೆ ಕಾರ್ಖಾನೆ ಕಂಪೆನಿಯನ್ನು, ಅವನು ಯಾರಿಗೋ ಮಾರಾಟ ಮಾಡಿ ಹೋದ. ತೆಗೆದುಕೊಂಡವನು, ಕಬ್ಬು ತೆಗೆದುಕೊಂಡವನಿಗೂ ಹಣ ಕೊಡಲಿಲ್ಲ ಸಕ್ಕರೆಯನ್ನೂ ಮಾರಾಟ ಮಾಡಲಿಲ್ಲ. ಅವನು, ಅದನ್ನು ಬಿಟ್ಟು ಕೊಟ್ಟು ಹೋಗಿ ಬಿಟ್ಟ. ಈ ರೀತಿಯ ಎಲ್ಲಾ ಕಾರ್ಖಾನೆಗಳನ್ನು ಹುಡುಕಿಕೊಳ್ಳುತ್ತಾ ಹೋಗುವುದು ಸರಕಾರದ ಜವಾಬ್ದಾರಿಯೇ? ಯಾರು ತೆಗೆದುಕೊಂಡಿದ್ದಾರೆ, ಯಾರು ಯಾರಿಗೆ ಮಾರಿದ್ದಾನೆ ಯಾರು ಬಾಗಿಲು ಮುಚ್ಚಿದ್ದಾರೆಂದು ನೋಡುವುದು ಸರಕಾರದ ಕೆಲಸವೇ? ನಾವು ಏಕೆ ಅದರೊಳಗೆ ಭಾಗವಹಿಸಿದ್ದೆವು ಎಂಬುದು ಮಾನ್ಯ ತಿಮ್ಮಪ್ಪನವರಿಗೆ ಗೊತ್ತಿದೆ. ನಾನು ಕಬ್ಬು ಬೆಳೆದಿರುವಂತಹ ರೈತರ ಹಿತದೃಷ್ಟಿಯಿಂದ ಸ್ವತಃ ಅಲ್ಲಿ ಭಾಗವಹಿಸಿದೆ. ಬೇರೆ ಪಾರ್ಟಿ ಗೀರ್ಟಿ ಎಂದು ರಾಜಕೀಯದಿಂದ ಅಲ್ಲ. ರೈತರಿಗೆ ಇನ್ನು ಒಂದೂವರೆ ಕೋಟಿ ರೂಪಾಯಿ ಕೊಡುವುದು ಬಾಕಿ ಇದೆ. ಕಾರ್ಮಿಕರು 6-7 ತಿಂಗಳಿಂದಲೂ ಕಣ್ಣೀರು ಹಾಕುತ್ತಿದ್ದಾರೆ. ಅವರಿಗೆ ಸಂಬಳ ಕೊಡಿಸಬೇಕು, ಇವರಿಗೆ ಕಬ್ಬಿನ ಹಣ ಕೊಡಿಸಬೇಕೆಂದು ಹೋಗಿದ್ದು. ರಾಜರತ್ನಂ ಗೊತ್ತಿಲ್ಲ. ಇವರೂ ಸ್ವತಃ ಎರಡು ಸಭೆಯಲ್ಲಿ ಭಾಗವಹಿಸಿದರು. ಮೊನ್ನೆ ತಾನೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಹಿರಿಯ ಅಧಿಕಾರಿಯವರನ್ನು ಕರೆಸಿ ಅವನು ಏನು ಎಸ್.ಬಿ.ಎಂ. ನಿಂದ ಸಾಲ ತೆಗೆದುಕೊಂಡಿದ್ದ, ಆ ಸಾಲದ ಬಾಬ್ತಿಗಾಗಿ ಈ ಸಕ್ಕರೆಗೆ ಬೀಗ ಹಾಕಿಸಿದೆ. ಕಾಫಿ ಕುಡಿಯಲು ದುಡ್ಡಿಲ್ಲದಂಥ ಮಾಲೀಕರನ್ನು ವಹಿಸಿಕೊಳ್ಳಲು ಯಾರೂ ಮುಂದೆ ಬರಲಿಲ್ಲ. ತಮಿಳುನಾಡು ಸರ್ಕಾರ ಈ ತರಹದ ಸಿಕ್ ಷುಗರ್ ಫ್ಯಾಕ್ಟರಿಗಳನ್ನು ಟೇಕ್ ಓವರ್ ಮಾಡಲು ಆರ್ಡಿನೆನ್ಸ್ ಮಾಡಿದೆ. ಅದರ ಮಾದರಿಯಲ್ಲಿ ಆರ್ಡಿನೆನ್ಸ್ ಹೊರಡಿಸುವಾಗ ರಾಜ್ಯಪಾಲರು ಸೆಷನ್ ಇದ್ದಾಗ ಆಗುವುದಿಲ್ಲವೆಂದು ಹೇಳಿದರು. ಮತ್ತೊಂದು ಕೇಂದ್ರ ಸರ್ಕಾರ ಮೂರು ವರ್ಷದ ವರೆವಿಗೆ ಯಾವುದೇ ಉದ್ಯಮವನ್ನು ನೇರವಾಗಿ ವಹಿಸಿಕೊಂಡು ಯಾರಿಗಾದರೂ ಕೊಡಬಹುದು ಎನ್ನುವ ಒಂದು ಕಾನೂನು ಇದೆ. ಅದರ ಪ್ರಕಾರ ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಬರೆದೆವು. ಆ ಸಮಯದಲ್ಲಿ ಅಲ್ಲಿ ಕಾರ್ಖಾನೆ ಎಷ್ಟು ಸಿಕ್ ಆಗಿತ್ತೋ ಅದಕ್ಕಿಂತಲೂ ಹೆಚ್ಚು ಸರ್ಕಾರ ಸಿಕ್ ಆಗಿತ್ತು. ಇದಕ್ಕೆ ನಾನು ಏನು ಮಾಡಬೇಕು. ಮಾತನಾಡುವಾಗ ಮನಸ್ಸಿಗೆ ಒಲ್ಲದ ವಿಷಯವನ್ನು ಹೇಳಬಾರದು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ಈಗ ಅವರಿಗೆ ಮೂರೂವರೆ ಕೋಟಿ ರೂಪಾಯಿಗಳ ರಿಯಾಯಿತಿ ಕೊಟ್ಟು ತೆಗೆದುಕೊಳ್ಳುತ್ತಿದ್ದಾರೆ. ಸಮಸ್ಯೆ ಬಗೆಹರಿಸಲು ನಾನು ನಿಮ್ಮೆಲ್ಲರನ್ನೂ ಕೂರಿಸಿಕೊಂಡು ಪ್ರಾಮಾಣಿಕವಾಗಿ ಪ್ರಯತ್ನಿಸಿ ಒಂದು ಹಂತಕ್ಕೆ ಬರುತ್ತಿದ್ದೇನೆ ಹೀಗಿರುವಾಗ ಬೇಜವಾಬ್ದಾರಿ ಸರ್ಕಾರವೆಂದು ಹೇಳುತ್ತೀರಿ ಎಂದು ನಾನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಈ ಒಂದು ವಿಧಾನ ಸಭೆ ಪ್ರಜಾಪ್ರಭುತ್ವದಲ್ಲಿ ದೇವಾಲಯ ಇದ್ದಂತೆ. ಇವರು ಕೊಟ್ಟಿರುವ ಆಶ್ವಾಸನೆ ಮಾತ್ರ ಹೇಳುವುದಕ್ಕೆ ಬಯಸುತ್ತೇನೆಯೇ ಹೊರತು ನಾನು ಬೇರೆ ಏನೂ ಹೇಳುವುದಿಲ್ಲ.... ಆಶ್ವಾಸನೆ ಕೊಟ್ಟಿರುವುದು ನಾಲಿಗೆಯೇ, ಏನು ಅದು? ನಾವು ಪ್ರತಿದಿನ ಅಲ್ಲಿ ರೈತರು, ಕಾರ್ಮಿಕರ, ಬದುಕಬೇಕೇ ಅಥವಾ ಬೇಡವೇ? ನಾನು ಮಾತನಾಡಿದರೆ ಬೇಜವಾಬ್ದಾರಿ ಎಂದೆನ್ನುತ್ತೀರಿ, ನೀವು ಈ ರೀತಿ ಹೇಳಿಕೆ ಕೊಟ್ಟಿರುವುದು ಬೇಜವಾಬ್ದಾರಿಯಲ್ಲವೇ?..... " ಹೌದು, ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಿದ್ದೇವೆ, ಅದನ್ನು ಅಧಿವೇಶನ ಮುಗಿದ ಮೇಲೆ ಇಷ್ಯೂ ಮಾಡಿಸೋಣ, ಈಗ ಆಗುವುದಿಲ್ಲ, ಯೋಚನೆ ಮಾಡುವೆವು " ಎಂದು ಉತ್ತರಿಸಿದ್ದಾರೆ.

ಅಧ್ಯಕ್ಷರು:– ಕಳೆದ ಅಧಿವೇಶನ ಮುಗಿದ ನಂತರ ಅವರು ರಾಜ್ಯ ಪಾಲರ ಹತ್ತಿರ ಹೋಗಿ ಮಾತನಾಡಿ, ಅಧಿವೇಶನ ಇಲ್ಲದಿದ್ದಾಗ ಆರ್ಡಿನೆನ್ಸ್ ಹೊರಡಿಸಬೇಕೆಂದು ಕೇಳಿ, ಆ ನಂತರ ಕೇಂದ್ರ ಸರ್ಕಾರದ ಪ್ರಕಾರ ಮೂರು ವರ್ಷ ಅವರು ನೇರವಾಗಿ ವಹಿಸಿಕೊಳ್ಳಬಹುದು ಎನ್ನುವ ವ್ಯವಸ್ಥೆ ಇದೆ, ಅನಂತರ ಯಾರಿಗಾದರೂ ಕೊಡಬಹುದು ಎಂದು ಹೇಳಿ ತಮಿಳುನಾಡಿನ ಉದಾಹರಣೆ ನೀಡಿ, ಮಾಡುವುದಕ್ಕೆ ಹೋದಾಗ ಕೇಂದ್ರ ಸರ್ಕಾರದಲ್ಲಿ ಆದಂಥ ರಾಜಕೀಯ ಬೆಳವಣಿಗೆಯಿಂದ ಅಲ್ಲಿ ಶಕ್ತಿಯೇ ಇಲ್ಲದಂತಾಯಿತು. ಈ ಮಧ್ಯೆ ಪುನಃ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವರೊಡನೆ ಮಾತನಾಡಿದ್ದು ಮೂರೂವರೆ ಕೋಟಿ ರಿಯಾಯಿತಿ ಕೊಟ್ಟಿದ್ದಾರೆ the problem is being solved. ಒಪ್ಪಿಕೊಳ್ಳಬೇಕು, ಏನು ಮಾಡುವುದಕ್ಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್:– ಅಧ್ಯಕ್ಷರೇ, Fortunately he has agreed.

ಶ್ರೀ ಕೆ.ಎಸ್. ಈಶ್ವರಪ್ಪ:– ಅಕ್ಟೋಬರ್, 2, ಮಹಾತ್ಮಗಾಂಧಿ ಜಯಂತಿಯ ದಿನದಂದು ಇಡೀ ಜಿಲ್ಲೆಯ ರೈತರು ಮುಖ್ಯಮಂತ್ರಿಗಳನ್ನು ಇಲ್ಲಿ ಯಾವ ಕಾರ್ಯಕ್ರಮವನ್ನು ಮಾಡುವುದಕ್ಕೆ ಬಿಡುವುದಿಲ್ಲವೆಂದರು. ಇಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಎಲ್ಲಾ ಶಾಸಕರು ಮತ್ತು ಪುನರುಜ್ಜೀವನ ಸಮಿತಿಯ ಸದಸ್ಯರನ್ನು ಕೂಡಿಸಿ ಒಂದು ಸಭೆ ಮಾಡಿ, ಇನ್ನೂ 45 ದಿನಗಳಲ್ಲಿ ಇದನ್ನು ಮಾಡಿ ಕೊಡುತ್ತೇನೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರೋ ಇಲ್ಲವೋ? ನಾನು ಆ ದಿನವೂ ಕೂಡ 45 ನೇ ದಿನ ಮುಗಿದು 46ನೇ ಬರುತ್ತದೆ, ಆ ದಿನವು ನೆನಪಿರಲಿ ಎಂದು ಕೇಳಿದಾಗ ಆ ಪರಿಸ್ಥಿತಿ ಬಾರದ ರೀತಿಯಲ್ಲಿ ನೋಡಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದರೋ ಇಲ್ಲವೋ ಕೇಳಿ? ನಾವು ಪ್ರತಿ ದಿನ ಅಲ್ಲಿ ಬದುಕಬೇಕು, ಇವರು ಬಂದು ಇಲ್ಲಿ ವಿಧಾನ ಸೌಧದಲ್ಲಿ ಇರಬಹುದು. ಇವರು ಪ್ರತಿಸಲ ಬಂದಾಗಲೂ ಒಂದು ಆಶ್ವಾಸನೆ ಕೊಟ್ಟು ತಪ್ಪಿಸಿಕೊಳ್ಳಬಹುದು. ನಾವು ಅಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ತಾವು ಒಂದು ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ತಪ್ಪಿಸಿಕೊಂಡು ಬರುವುದಕ್ಕಾಗಿ ಒಂದು ರಾಜ್ಯದ ಮುಖ್ಯಮಂತ್ರಿಗಳು ಆಶ್ವಾಸನೆ ಕೊಡುತ್ತಾರೆ. ಎಂದು ಹೇಳುತ್ತೀರಿ, ಅದು ಒಳ್ಳೆಯ ಭಾಷೆ ಅಲ್ಲ. ಮಾನ್ಯ ತಿಮ್ಮಪ್ಪನವರೇ, ನೀವು ಹೇಳಿ, ಇದು ಸರಿಯೇ? ಮಾನ್ಯ ನಂಜೇಗೌಡರೆ, ತಾವು ಹೇಳಿ ಇದು ಸರಿಯೇ? ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟು ಬಂದ ನಂತರದ ಏನೆಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎನ್ನುವಂತಹ ಮಾತುಗಳನ್ನು ಅವರೇ ಹೇಳುತ್ತಿದ್ದಾರೆ, ಹಾಗೂ ನಮ್ಮನಿಮ್ಮೆಲ್ಲರ ಎದುರಿಗೆ ಮಾಹಿತಿ ಇರುವಾಗ, ಈ ರೀತಿ ಮಾಡುವುದು ಸಾಧುವಲ್ಲ. ಇದರ ಮೇಲೆ ನಿಮ್ಮಿಷ್ಟ. ಏಕೆಂದರೆ ನಿಮಗೆ ಹಕ್ಕು ಇದೆ, ಹೇಳಲೇಬೇಕು ಎಂದರೆ ಹೇಳಬಹುದು, ಇದಕ್ಕೆ ನನ್ನ ಆಕ್ಷೇಪಣೆ ಇಲ್ಲ. ನೀವು ಬೇಕಾದರೆ ಹೇಳಿ, ಅದಕ್ಕೆ ಅವರು ಪ್ರತ್ಯುತ್ತರ ಕೊಡುತ್ತಾರೆ. ಆದರೆ, ಚರ್ಚೆಯಲ್ಲಿ ಅದು ಚೆನ್ನಾಗಿ ಕಾಣುವುದಿಲ್ಲ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಬೇಕಾಯಿತು.

ಶ್ರೀ ಕೆ.ಎಸ್. ಈಶ್ವರಪ್ಪ:– ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ವಿಧಾನ ಸಭೆಯಲ್ಲಿ ಕೊಟ್ಟಂತಹ ಆಶ್ವಾಸನೆ, ಮತ್ತು ಹೊರಗಡೆ ಕೊಟ್ಟಂತಹ ಆಶ್ವಾಸನೆ ಯಾವುದೂ ಈಡೇರುತ್ತಿಲ್ಲ. ಹೋರಾಟ ಮಾಡಿದರೂ ಕೂಡ ಅದಕ್ಕೆ ಬೆಲೆ ಇಲ್ಲ. ನೀವು ಎಲ್ಲಿ ಹೇಳಬೇಕು

ಎಂದು ಹೇಳುತ್ತೀರೋ ನಾನು ಅಲ್ಲಿ ಹೇಳುತ್ತೇನೆ. ನಿಮಗೇ ಈ ವಿಚಾರ ಬಿಡುತ್ತೇನೆ. ನೀವು ಇಂತಹ ಕೆಲಸ ಮಾಡಿ ಎಂದು ಹೇಳಿದರೆ ನಾನು ಅಂತಹ ಕೆಲಸವನ್ನು ಮಾಡುತ್ತೇನೆ. ಬೇಕಾದರೆ ವಿಧಾನ ಸಭೆಗೆ ರಾಜೀನಾಮೆ ಕೊಡು ಎಂದು ಹೇಳಿದರೆ, ನಾನು ರಾಜೀನಾಮೆ ಕೊಡುತ್ತೇನೆ. ಶಿವಮೊಗ್ಗದಲ್ಲಿ ರೈತರು, ಕಾರ್ಮಿಕರು ಪ್ರತಿದಿನ ನೇಣುಹಾಕಿಕೊಂಡು ಸಾಯುವುದನ್ನು ನಾವು ನೋಡಬೇಕೇ? ಯಾವ ವಿಚಾರಕ್ಕೂ ಎಲ್ಲಾ ಪಕ್ಷದವರು ಈ ರೀತಿ ಒಂದಾಗಿರಲಿಲ್ಲ. ತಮಗೆ ಬಹುಶಃ ಗೊತ್ತಿರಬಹುದು. ಕಾಗೋಡು ತಿಮ್ಮಪ್ಪನವರು, ಬಂಗಾರಪ್ಪನವರು ಈ ವಿಷಯದ ಬಗ್ಗೆ ಮಾತನಾಡಬೇಕು ಎಂದು ಕೇಳುತ್ತಿದ್ದಾರೆ....

ಅಧ್ಯಕ್ಷರು:- ತಾವು ಆ ಭಾಗದ ಜನರ ಪ್ರತಿನಿಧಿಯಾಗಿ ಎಷ್ಟೇ ಅಗ್ರಹಪೂರ್ವಕವಾಗಿ ಈ ಸದನಕ್ಕೆ ಮನವಿ ಸಲ್ಲಿಸಬಹುದು. ಈ ಸದನ ಅದಕ್ಕೆ ಸೂಕ್ತ ವೇದಿಕೆ. ತಾವು ಯಾವ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂದರೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ಫಾರ್ಚೂನೇಟ್ಲಿ ಒಪ್ಪಿಕೊಂಡಿದ್ದಾರೆ. ಮೂರೂವರೆ ಕೋಟಿ ರೂಪಾಯಿಗಳು ರಿಯಾಯಿತಿ ಕೊಟ್ಟಿದ್ದಾರೆ, ಇದಕ್ಕೆ ಪರಿಹಾರ ಒದಗಿಸುವಲ್ಲಿ ಒಂದು ಹಂತಕ್ಕೆ ಬಂದು ತಲುಪಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಲ್ಲಿ ಏನಾಯಿತು ಎಂದರೆ ಕಾರ್ಮಿಕ ಹೆಣ್ಣು ಮಕ್ಕಳು ಮುತ್ತಿಗೆ ಹಾಕಿದರು. ಈ ಸನ್ನಿವೇಶದಲ್ಲಿ ಒಂದು ವಿಶೇಷ ಸಭೆ ಕರೆದರು. ಅಲ್ಲಿಗೆ ವಿಶೇಷವಾಗಿ 3.36 ಕೋಟಿ ಬಡ್ಡಿ ಮನ್ನಾ ಮಾಡುವ ಕುರಿತು ಒಂದು ಫ್ಯಾಕ್ಸ್ ಬಂತು. ಇದನ್ನು ನೋಡಿಕೊಂಡು ಮುತ್ತಿಗೆ ಹಾಕಿರುವ ಜನರು ಜಾಗ ಖಾಲಿ ಮಾಡಿದರು. ಅಲ್ಲಿನ ಜಿಲ್ಲಾಧಿಕಾರಿಗಳು ಈ ರೀತಿ ಬ್ಯಾಂಕಿನವರು ಬಡ್ಡಿ ಮನ್ನಾ ಮಾಡಲು ಒಪ್ಪಿಕೊಂಡಿದ್ದಾರೆಂದು, ಮಾಲೀಕರಿಗೆ ಸುಮಾರು ನೂರುಬಾರಿ ದೂರವಾಣಿ ಮಾಡಿದರು. ನೀವು ಬನ್ನಿ, ಕುಳಿತುಕೊಂಡು ಚರ್ಚೆ ಮಾಡೋಣ ಎಂದು ಹೇಳಿದರೂ ಇವತ್ತಿನವರೆಗೂ ಆ ಮಾಲೀಕ ಈ ಒಂದು ರೆಸಲ್ಯೂಷನ್‌ಗೆ ಬೆಲೆ ಕೊಟ್ಟಿದ್ದಾನೆಯೇ? ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಲಿ, ನಾನು, ನೀವು ಹೇಳುವ ರೀತಿಯಲ್ಲಿ ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್:- ನಾವು ಭಾರತದ ಸಂವಿಧಾನದಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ, ಇಂಡಿಯನ್ ಪೀನಲ್ ಕೋಡ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ. ನಮಗೆ ಮನಸ್ಸು ಬಂದ ತಕ್ಷಣ ಏಕಾಏಕಿ ರಂಗರಾಜುನನ್ನು ದಸ್ತಗಿರಿ ಮಾಡಿಕೊಂಡು ಬರುವುದಕ್ಕಾಗುತ್ತದೆಯೇ? ಮಾನ್ಯ ಸದಸ್ಯರು ಹೇಳಿದ ಹಾಗೆ ಆತ ಆದಷ್ಟು ಅವಾಯ್ಡ್ ಮಾಡಿದ. ಸರ್ಕಾರದ ಕರೆಗೂ ಕೂಡ ಅವಾಯ್ಡ್ ಮಾಡಿದ. ಕೊನೆಗೆ 420 ರ ಕೆಳಗೆ ಕೇಸ್ ಹಾಕಿಸಿದೆವು. ಪೂರ್ತಿ ಫ್ಯಾಕ್ಟರಿಯನ್ನು ಸೀಜ್ ಮಾಡಿಸಿದೆವು. ಈ ಎಲ್ಲಾ ವಿಷಯ ಅವರಿಗೆ ಗೊತ್ತಿದೆ. ನಮ್ಮಡೆಪ್ಯೂಟಿ ಕಮೀಷನ್‌ರವರಿಗೆ ಬೇರೆ ಕೆಲಸ ಇಲ್ಲವೇ? ಆದರೂ ನಾವು ಅವರಿಗೆ ಹೇಳಿದೆವು. he has done his best. I have all the satisfaction, ಸರ್ಕಾರದ ಕೆಲಸ ಅಂದರೇ ಈ ಷುಗರ್ ಫ್ಯಾಕ್ಟರಿಯನ್ನು ಕಾಯುವುದೇ? ನೌಕರರಿಗೆ ಸಂಬಳ ಕೊಟ್ಟಿಲ್ಲ, ರೈತರಿಗೆ ಕಬ್ಬಿನ ದುಡ್ಡು ಕೊಟ್ಟಿಲ್ಲ ಎಂದು ರೈತ ಸಂಘದವರು ನನ್ನಲ್ಲಿಗೆ ಬಂದು ಮಾತನಾಡಿದರು. ಏಕೆಂದರೆ ಅವರಿಗೆ ನನ್ನ ಬಗ್ಗೆ ಭರವಸೆ ಇದೆ.

ಹಾಗೂ ವಿಶ್ವಾಸ ಇದೆ. ಇವರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಸಾಮಾನ್ಯವಾಗಿ ಜನರು ಘೇರಾವು ಮಾಡುವುದಕ್ಕೆ ಬರುತ್ತಾರೆ. ಅಂತಹ ಜನರಿಗೆ ಇಷ್ಟೆಲ್ಲಾ ನಮ್ಮ ಪ್ರಯತ್ನಗಳನ್ನು ಹೇಳಿ ಕಳುಹಿಸಿದೆವು. ಈಗ ಅದು ಒಂದು ಹಂತಕ್ಕೆ ಬಂದಿದೆ. new Company which is going to take it over they have agreed to these concessions which the Bank demand. That has been done. ಇದಕ್ಕಿಂತ ಹೆಚ್ಚಿಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಬೇಕಾದರೆ ನೀವು ಕಂಪನಿಯನ್ನಾದರೂ ತೆಗೆದುಕೊಳ್ಳಿ, ಅವನನ್ನು ಅರೆಸ್ಟ್ ಆದರೂ ಮಾಡಿಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಕಳೆದ ಬಾರಿ ಇದೇ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದಾಗ ಸನ್ಮಾನ್ಯ ಸಕ್ಕರ ಸಚಿವರು, ಏಳು ರಾಜ್ಯಗಳ, ಏಳು ಕೋರ್ಟ್‌ಗಳ ವಾರೆಂಟ್ ಅವನ ಮೇಲೆ ಇದೆ ಎಂದು ಹೇಳಿದರು. ಹಾಗಾದರೆ ಅವನನ್ನು ಅರೆಸ್ಟ್ ಮಾಡಲಿಕ್ಕೆ ಇವರಿಗೆ ಶಕ್ತಿ ಇಲ್ಲವೇ? ಏಳು ರಾಜ್ಯಗಳ, ಏಳು ವಾರೆಂಟ್ ಒಬ್ಬ ವ್ಯಕ್ತಿಯ ಮೇಲೆ ಇದ್ದಂತಹ ಸಂದರ್ಭದಲ್ಲಿ ಕೂಡ ಅವನನ್ನು ನೀವು ಅರೆಸ್ಟ್ ಮಾಡಲಿಕ್ಕೆ ಆಗುವುದಿಲ್ಲ ಎನ್ನುವುದಾದರೆ ಸರ್ಕಾರ ಇದೆಯೋ ಇಲ್ಲವೋ ಎನ್ನುವುದನ್ನು ತಾವು ಹೇಳಬೇಕು. ಇಂತಹ ಸಂದರ್ಭದಲ್ಲಿ ನಾನು ಇಲ್ಲಿ ಯಾವ ರೀತಿ ಪ್ರಶ್ನೆ ಕೇಳಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾವು ಇಲ್ಲಿ ಭಾಷಣವನ್ನು ಮಾಡುವಾಗ, ಇಂತಹ ಮಾತುಗಳನ್ನು ಆಡಬೇಡಿ ಎಂದು ಸನ್ಮಾನ್ಯ ಅಧ್ಯಕ್ಷರು ಹೇಳುತ್ತಾರೆ. ತಡೆದುಕೊಳ್ಳಲಾರದೆ ಹೊಟ್ಟೆ ಉರಿಯಿಂದ ನಾನು ಈ ಮಾತುಗಳನ್ನು ಆಡುತ್ತೇನೆ. ಅಂತಹ ಶಬ್ದಗಳು ಬಂದಾಗ ಖಂಡಿತ ನಾನು ಕ್ಷಮೆ ಕೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಗೌರವ ಉಂಟು ಮಾಡಬೇಕು ಎನ್ನುವುದು ನನ್ನ ಮನಸ್ಸಿನಲ್ಲಿಲ್ಲ.

ಅಧ್ಯಕ್ಷರು:- ನೀವು ಇಲ್ಲಿ ಕ್ಷಮೆ ಕೇಳುವ ಅಗತ್ಯವಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ಇಂತಹ ಒಂದು ದೊಡ್ಡ ಸಭೆಯಲ್ಲಿ ಕ್ಷಮೆ ಹೇಳುತ್ತಿದ್ದೇನೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು:- ನೀವು ಕ್ಷಮೆ ಕೇಳುವಂಥ ದೊಡ್ಡ ತಪ್ಪು ಮಾಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಲ್ಲಿ ಜನ ನೇಣು ಹಾಕಿಕೊಂಡು ಸಾಯುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಇದು ಗೊತ್ತಿದೆ. ಆ ಜನಗಳು ಏನು ಮಾಡಬೇಕು? ಈ ಕೇಸ್‌ನಲ್ಲೂ, ಇನ್ನೊಂದು ಕೇಸ್‌ನಲ್ಲೂ ಅವನನ್ನು ಅರೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಏನರ್ಥ? ನಾನು ಕಳೆದ ಬಾರಿಯೂ ಸಹ ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅವನನ್ನು ಅರೆಸ್ಟ್ ಮಾಡುವುದಕ್ಕೆ ನಿಮಗಿರುವ ತೊಂದರೆ ಏನು? ನಿಮಗೂ, ಅವನಿಗೂ ಏನಾದರೂ ಸಂಬಂಧ ಇದೆಯೇ? ನಿಮಗೇನಾದರೂ ಅವನಿಗೆ ರಕ್ಷಣೆ ಕೊಡಬೇಕೆಂದು ಆಸೆ ಇದೆಯೇ? ಸಾವಿರಾರು ಜನ ಕಾರ್ಮಿಕರು, ರೈತರು ಹಾಳಾದರೂ ಪರವಾಗಿಲ್ಲ, ಒಬ್ಬ ಮಾಲೀಕ ಬದುಕಬೇಕೆಂಬ ಆಸೆ ನಿಮಗೇನಾದರೂ ಇದೆಯೇ? ಈ ಪ್ರಶ್ನೆಯನ್ನು ನಾನು ಇಲ್ಲಿ ಕೇಳದೆ ಮತ್ತೆಲ್ಲಿ ಕೇಳಲಿ.

ಅಧ್ಯಕ್ಷರು:- ಕಾನೂನಿನ ವ್ಯವಸ್ಥೆ ಹೇಗೆ ಇದೆ ಎಂದರೆ, ನಿಮ್ಮ ಪಕ್ಕದಲ್ಲಿ ವಕೀಲರು ಕುಳಿತಿದ್ದಾರೆ, ಬೇಕಾದರೆ ಅವರನ್ನೇ ಕೇಳಿ ನೋಡಿ. ನಿಮ್ಮ ಮನೆಯಲ್ಲಿ ಒಂದು ಒಡವೆ ಕಳ್ಳತನವಾದರೆ, ಪೋಲೀಸ್‌ನವರು ಅದನ್ನು ರಿಕವರಿ ಮಾಡಿದ ಮೇಲೆ ಮಾಲನ್ನು ನೇರವಾಗಿ ನಿಮ್ಮ ಕೈಗೆ ಕೊಡಲು ಸಾಧ್ಯವಿಲ್ಲ. ಅಥವಾ ನೀವು ಹೋಗಿ ಆ ಮಾಲನ್ನು ತೆಗೆದುಕೊಂಡು ಬರುವಂತೆ ಇಲ್ಲ. ಪುನಃ ನೀವು ಪೋಲೀಸ್ ಸ್ಟೇಷನ್‌ಗೆ ಹೋಗಿ, ಅವರು ಕೋರ್ಟಿಗೆ ಹೋಗಿ, ಅಲ್ಲಿ ಅದನ್ನು ಹಾಜರುಪಡಿಸಿ, ರಿಕವರ್ ಮಾಡಿದ್ದೇವೆ ಎಂದು ಅದನ್ನು ತೋರಿಸಿ, ನಿಮ್ಮ ಮಾಲನ್ನು ನೀವು ಗುರುತಿಸಿದರೆ ಮಾತ್ರ ನಿಮಗೆ ಅದನ್ನು ಒಪ್ಪಿಸಲಾಗುವುದು. ಹಾಗೆ ಮಾಲನ್ನು ತೆಗೆದುಕೊಂಡು ಬರುವುದಕ್ಕೆ ಆಗುತ್ತದೆಯೇ? ಈ ಕಾನೂನು ನಾನಾ ರೀತಿಯಲ್ಲಿ ರಕ್ಷಣೆ ಕೊಡುತ್ತದೆ. ಕೋರ್ಟಿಗೆ ಹೋಗುತ್ತಾರೆ, ಬೇಲ್ ತೆಗೆದುಕೊಳ್ಳುತ್ತಾರೆ. ಈ ಕೋರ್ಟ್ ತಪ್ಪಿಸುತ್ತಾರೆ, ಇನ್ನೊಂದು ಕೋರ್ಟಿಗೆ ಹೋಗಿ ಬೇಲ್ ತೆಗೆದುಕೊಳ್ಳುತ್ತಾರೆ. ನಾನು ತಮಗಿಷ್ಟೇ ಹೇಳಬಲ್ಲೆ. ಒಂದು ವರ್ತಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಕಳುಹಿಸಿದ್ದಾರೆ. ನೀವು ಯಾವ ಜನರ ಪರ ವಾದ ಮಾಡುತಿದ್ದೀರಿ, ಅವರ ಹಿತದೃಷ್ಟಿಯಿಂದ ಕೆಲವು ವಿಚಾರಗಳನ್ನು ನಾವು ಇಲ್ಲಿ ಹೊರಗೆಡವುದು ಬೇಡ. ಏನೋ ಒಂದು ಹಂತಕ್ಕೆ ತಲುಪಿದೆ. ಅದಕ್ಕೆ ಖಚಿತವಾದಂಥ ಮಾಹಿತಿಯನ್ನು ಇಟ್ಟುಕೊಂಡು ನಾನು ತಮಗೆ ತಿಳಿಸಿದ್ದೇನೆ. ಆಮೇಲೆ ಬೇಕಾದರೆ ಐದು ನಿಮಿಷ ತಾವು ನನ್ನ ಆಫೀಸಿಗೆ ಬನ್ನಿ. ನಾನು ತೋರಿಸುತ್ತೇನೆ. ತಿಮ್ಮಪ್ಪನವರೂ ಬನ್ನಿ. ಆ ಭಾಗದ ಜನಪ್ರತಿನಿಧಿಯಾಗಿ ನಿಮ್ಮ ಎಲ್ಲಾ ಆ ವೇದನೆ ಕೂಡ ಆ ಜನರಿಗೆ ಒಳ್ಳೆಯದಾಗಬೇಕು. ಅಷ್ಟೇ ಅಲ್ಲವಾ? ಅದಕ್ಕಿಂತ ಹೆಚ್ಚಿಗೆ ಏನೂ ಇದರಲ್ಲಿ ಸ್ವಾರ್ಥ ಇರುತ್ತದೆ? ಜನರಿಗೆ ಒಳ್ಳೆಯದಾಗಬೇಕು. ಅದಕ್ಕೆ ಅನುಗುಣವಾದಂಥ ಕೆಲಸ ಏನೋ ಆದಂತೆ ಇದೆ. ತಾವು ದಯಮಾಡಿ ಬನ್ನಿ. ನನಗೆ ವಿಶ್ವಾಸ ಬಂದಿದೆ. ನಾನು ಈ ಕಾಗದವನ್ನು ಆಮೇಲೆ ನಿಮಗೆ ತೋರಿಸುತ್ತೇನೆ. ಮಾತನಾಡೋಣ. ಇಲ್ಲಿ ಚರ್ಚೆ ಮಾಡುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿರುವುದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು, ಜಿಲ್ಲಾಧಿಕಾರಿಗಳು ಇವರೇನೂ ಪ್ರಯತ್ನ ಮಾಡಿಲ್ಲ ಎಂದು ನಾನು ಖಂಡಿತಾ ಹೇಳುವುದಿಲ್ಲ. ಇವರೇನು ಪ್ರಯತ್ನ ಮಾಡುತ್ತಿದ್ದಾರೆ, ಇವರ ಪ್ರಯತ್ನವನ್ನು, ಅವನು ಲೆಕ್ಕದಲ್ಲಿ ಇಟ್ಟುಕೊಂಡಿಲ್ಲ. ಅವರಿಗೆ ಅವಶ್ಯಕತೆ ಇರಲಿಲ್ಲ. ಜಿಲ್ಲಾಧಿಕಾರಿಗಳು ನೂರು ಸಾರಿ ಅವರಿಗೆ ಫೋನ್ ಮಾಡಿದರೆ ಬಾರಪ್ಪ ನಿಮಗೆ 3 ಕೋಟಿ 38 ಲಕ್ಷ ರೂಪಾಯಿಗಳಷ್ಟು ಬಡ್ಡಿ ಮನ್ನಾ ಮಾಡಿದ್ದಾರೆ, ಬಾ ಕುಳಿತುಕೊಂಡು ಚರ್ಚೆ ಮಾಡು, ಇನ್ನೇನು ಸಮಸ್ಯೆ ಇದ್ದರೂ ಪರಿಹಾರ ಮಾಡೋಣ ಎಂದರೆ ಅವನು ಬರುವುದಕ್ಕಾಗುವುದಿಲ್ಲ ಎಂದರೆ ಹೇಗೆ? ಅವನ ಮೇಲೆ ಏಳು ವಾರೆಂಟ್ ಇದೆ, ಇಷ್ಟು ಜನ ಪೋಲೀಸರು ಇದ್ದಾರೆ, ಆ ಕಾರ್ಮಿಕ ರೈತರನ್ನು ಬದುಕಿಸುವುದಕ್ಕಾಗುವುದಿಲ್ಲವೆಂದರೆ ನಿಮ್ಮ ಸರ್ಕಾರ ಏತಕ್ಕೆ ಬೇಕು ಹೇಳಿ. ಈ ಮಾತನ್ನು ಹೇಳಿದರೆ ಮುಖ್ಯಮಂತ್ರಿಗಳಿಗೆ ಸಿಟ್ಟು ಬರುತ್ತದೆ. ಅವನ ಮೇಲೆ ವಾರೆಂಟ್ ಇದೆ. ಅವನು ನಿಮ್ಮ ಮಾತನ್ನು ಕೇಳುವುದಕ್ಕೆ ತಯಾರಿಲ್ಲ. ವಿಧಾನಸಭೆಯಲ್ಲಿ ನೀವು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಅದರಂತೆ ನಡೆದುಕೊಂಡಿರಾ? ಏನು ಆಶ್ವಾಸನೆ ಕೊಟ್ಟಿದ್ದರು ಎಂದರೆ " ಒಂದು ತಿಂಗಳಲ್ಲಿ

ಸಕ್ಕರೆ ತೆಗೆದುಕೊಂಡು ರೀಪ್ರೋಸೆಸ್ ಮಾಡಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಆಹಾರವನ್ನು ರೈತರಿಗೆ ಕಾರ್ಮಿಕರಿಗೆ ಕೊಡುವ ಏರ್ಪಾಡು ಮಾಡುತ್ತೇವೆ ". ಈ ರೀತಿ ಆಶ್ವಾಸನೆಯನ್ನು ವಿಧಾನಸಭೆಯಲ್ಲಿ ಕೊಟ್ಟಾಗ ಆ ಸಕ್ಕರೆ ಹಾಳಾಗುವ ಸಂದರ್ಭದಲ್ಲಿ....

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು):- ಕಂಪನಿಯ ಮಾಲೀಕನ ಮೇಲೆ 12 ವಾರೆಂಟ್‌ಗಳು ಇವೆ. ವಾರೆಂಟ್ ಇರುವುದು ನಮ್ಮ ರಾಜ್ಯದ್ದು ಒಂದೇ ಅಲ್ಲ. ದೇಶದಲ್ಲಿರುವ 12 ರಾಜ್ಯಗಳಲ್ಲಿ, ಅವನ ಮೇಲೆ ನಾನಾ ರೀತಿಯ ಕೇಸುಗಳು ಇವೆ. ಅವನು ನಮ್ಮ ರಾಜ್ಯದಲ್ಲಿ ಇರುವುದಿಲ್ಲ. ತಮಿಳುನಾಡಿನಲ್ಲಿ ಇರುತ್ತಾನೆ. ಯಾವಾಗಲೋ ಇಲ್ಲಿಗೆ ಬಂದು ಹೋಗುತ್ತಿರುತ್ತಾನೆ. ನಮ್ಮಲ್ಲಿ ಕೇಸುಗಳನ್ನು ಹಾಕಿದ್ದರೂ ಅದಕ್ಕೆ ನ್ಯಾಯಾಲಯದಿಂದ ಕೆಲವು ಕೇಸುಗಳಲ್ಲಿ ಬೇಲ್‌ನ್ನು ತೆಗೆದುಕೊಂಡಿದ್ದಾನೆ. ಅದೇನೆ ಇರಲಿ, ನಾವು ಕಾನೂನಿನ ಚೌಕಟ್ಟು ಬಿಟ್ಟು ಹೊರಗೆ ಹೋಗುವ ಪ್ರಯತ್ನವನ್ನು ಮಾಡುವುದಿಲ್ಲ ಎಂದು ಹೇಳುತ್ತಿದ್ದೇನೆ. ಅದಲ್ಲದೆ ಸಕ್ಕರೆ ರಿಲೀಸ್ ಬಗ್ಗೆ ತಾವು ಹೇಳುತ್ತಿದ್ದೀರಿ. ನಾನು ಕೊಟ್ಟ ಆಶ್ವಾಸನೆ ಮೇರೆಗೆ ಸಕ್ಕರೆ ರಿಲೀಸ್ ಆಗಿ ಬಂದಿದೆ. ಆದರೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ನ್ಯಾಯಾಲಯಕ್ಕೆ ಹೋಗಿ ನ್ಯಾಯಾಲಯದಿಂದ ಸಕ್ಕರೆ ರಿಲೀಸ್ ಮಾಡಿಸಿಕೊಳ್ಳುವುದಕ್ಕೆ ತಡೆಯಾಜ್ಞೆಯನ್ನು ತಂದರು. ಈ ರೀತಿ ತಡೆಯಾಜ್ಞೆ ಇರುವಾಗ ಸಕ್ಕರೆ ರಿಲೀಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ ಕಾರಣ ಆ ಸಕ್ಕರೆ ಇಂದಿಗೂ ಸಹ ಆ ಗೋಡೌನ್‌ನಲ್ಲಿದೆ. ಕಳೆದ ತಿಂಗಳು 27ನೇ ತಾರೀಖಿನವರೆಗೂ ರಿಲೀಸ್ ಆರ್ಡರ್ ಸರ್ಕಾರದ ಜೊತೆಯಲ್ಲಿ ಇತ್ತು. ಆದರೆ ತಡೆಯಾಜ್ಞೆ ವೇಕೇಟ್ ಆಗದೆ, ನಮಗೆ ರಿಲೀಸ್ ಮಾಡುವುದಕ್ಕಾಗುವುದಿಲ್ಲ. ನ್ಯಾಯಾಲಯದಲ್ಲಿರುವುದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗಿಲ್ಲ. ಆದಾದ ಕೂಡಲೇ ನೀವು ಸಾಕಷ್ಟು ಸಲ ಈ ಸಭೆಗಳಲ್ಲಿ ಪಾಲುಗೊಂಡಿದ್ದೀರಿ. ಕಾರ್ಮಿಕರ ಜೊತೆಯಲ್ಲಿ ರೈತರ ಜೊತೆಯಲ್ಲಿ ತಾವೂ ಸಹ ಪಾಲುಗೊಂಡು ಸಾಕಷ್ಟು ಇಲ್ಲಿ ಚರ್ಚೆ ಮಾಡಿದ್ದೀರಿ. ಸಮಸ್ಯೆಯನ್ನು ಬಗೆಹರಿಸಲು ಸಾಕಷ್ಟು ಪ್ರಯತ್ನವನ್ನು ಸರ್ಕಾರ ಮಾಡಿದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದೆರಡು ಸಲ ಮೀಟಿಂಗ್‌ನ್ನು ಮಾಡಿದ್ದೇವೆ. ನಮ್ಮ ಅಧ್ಯಕ್ಷತೆಯಲ್ಲೂ ಒಂದೆರಡು ಮೀಟಿಂಗ್ ನಡೆದಿದೆ. ತಾವೂ ಸಹಾ ಬಂದಿದ್ದಿರ. ನಾವು ಸಾಕಷ್ಟು ಪ್ರಯತ್ನಗಳನ್ನು ಮಾಡಿದರೂ ಸಹ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಲಿಲ್ಲ. ನಮಗೆ ಸಹಕಾರ ಮಾಡಿ. ಆದಷ್ಟು ಬೇಗನೆ ಈ ವಿಷಯವನ್ನು ಇತ್ಯರ್ಥಮಾಡೋಣ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಅವರನ್ನು ಅರೆಸ್ಟ್ ಮಾಡುವುದಕ್ಕೆ ಇವರಿಗೆ ಆಸಕ್ತಿ ಇಲ್ಲ ಎಂದು ಹೇಳಿದ್ದಕ್ಕೆ ಅವನು ಕರ್ನಾಟಕ ರಾಜ್ಯದಲ್ಲಿ ಇಲ್ಲ, ತಮಿಳುನಾಡಿನಲ್ಲಿದ್ದಾನೆ, ಬೇರೆ ಬೇರೆ ಕಡೆ ಇದ್ದಾನೆ ಎಂದು ಇವರು ಹೇಳುತ್ತಿದ್ದಾರೆ, ಮೂರು ದಿನ ಕರ್ನಾಟಕ ರಾಜ್ಯದಲ್ಲಿದ್ದ. ಮುಖ್ಯಮಂತ್ರಿಗಳು ಕರೆದಂಥ ಸಭೆಗೆ ಬಂದಿದ್ದ. ವಿಧಾನಸೌಧದಲ್ಲೇ ಮೀಟಿಂಗ್ ಆಯಿತು. ಇವರನ್ನು ಅರೆಸ್ಟ್ ಮಾಡುವುದಕ್ಕಾಗುವುದಿಲ್ಲವೆಂದರೆ ಹೇಗೆ? ಅವನನ್ನು ಅರೆಸ್ಟ್ ಮಾಡಲಿಕ್ಕೆ ನಿಮಗೇನಾಗಿದೆ?

ಅಧ್ಯಕ್ಷರು:- ಮೀಟಿಂಗ್‌ಗೆ ಕರೆದು ಅರೆಸ್ಟ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರೇ, ವಾರೆಂಟ್ ಇದೆ. 12 ವಾರೆಂಟ್ ಅವನ ಮೇಲೆ ಇದೆ ಎಂದು ಮಾನ್ಯ ಮಂತ್ರಿಗಳೇ ಹೇಳುತ್ತಿದ್ದಾರೆ.

ಅಧ್ಯಕ್ಷರು:- ರಾಜ್ಯದ ಮುಖ್ಯಮಂತ್ರಿಗಳು ಸಂಧಾನಕ್ಕೆ ಎಂದು ಸಭೆಗೆ ಕರೆಸಿ, ಆತನನ್ನು ಅರೆಸ್ಟ್ ಮಾಡಿಸಿದರೆ ಅದು ನಂಬಿಕೆದ್ರೋಹ ಆಗುವುದಿಲ್ಲವೇ? ಆ ರೀತಿ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ಅದಕ್ಕೇ ಹೇಳುತ್ತಿರುವುದು. ಅರೆಸ್ಟ್ ಮಾಡಬೇಕು ಎಂದು ಆಸಕ್ತಿ ಇದ್ದರೆ ವಿಧಾನಸೌಧದಲ್ಲಿ ಅರೆಸ್ಟ್ ಮಾಡಬೇಕು ಎಂದು ಹೇಳುತ್ತಿಲ್ಲ. ಎಲ್ಲಾದರೂ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್:- ಈ ಬಂಧನ ಎಂದು ಬಂದಿದ್ದಕ್ಕೆ ನಾನು ತಮಗೆ ಜ್ಞಾಪಿಸುತ್ತೇನೆ. ನನ್ನನ್ನು ಬಂಧನ ಮಾಡಬೇಕೆಂದು ಹೇಳಿ. ನನ್ನ ಮೇಲೆ ಒಂದು ವಾರೆಂಟ್ ಇತ್ತು. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನಾವು ಮನವಿಯನ್ನು ಕೊಡುವುದಕ್ಕೆ ಬಂದೆವು. ಈ ಕಡೆ ಬಾಗಿಲಿನಲ್ಲಿ ಮನವಿ ಕೊಡುವುದಕ್ಕೆ ಬಂದೆವು. ಆ ಕಡೆ ಬಾಗಿಲಿನಲ್ಲಿ ಇಳಿಯುವಾಗ ನನ್ನನ್ನು ಬಂಧನ ಮಾಡಿಬಿಟ್ಟರು.

ಅಧ್ಯಕ್ಷರು:- ನೀವೇ ಹೇಳಿರುತ್ತೀರಿ.

ಶ್ರೀ ವಾಟಾಳ್ ನಾಗರಾಜ್:- ಹಾಗೆಂದರೆ ಹೀಗೆನ್ನುತ್ತೀರಿ. ಹೀಗೆಂದರೆ, ಹೀಗೆ ಎನ್ನುತ್ತೀರಿ. ಒಂದು ತರಹ ಉಲ್ಟಾ ಹೊಡೆಯುತ್ತೀರಿ. ಅದೊಂದು ತರಹ ಅಪಾಯ ನಮಗೆ.

ಶ್ರೀ ಡಿ.ಎ. ಸದಾನಂದಗೌಡ:- ವಾಟಾಳ್ ನಾಗರಾಜ್‌ರಿಗೆ ಬಂಧನ ಎಂದರೆ ತುಂಬಾ ಖುಷಿ. ಮಾನ್ಯ ನಾಗರಾಜ್‌ರವರೇ ಹೇಳಿರಬೇಕು. ಅವರಿಗೆ ಬಂಧನ ಎಂದರೆ ಖುಷಿ. ಮತ್ತು ಆ ಫೋಟೊ ಪೇಪರ್‌ನಲ್ಲಿ ಬಂದರೆ ಖುಷಿ ಸಾರ್.

ಶ್ರೀ ಕೆ.ಎಸ್. ಈಶ್ವರಪ್ಪ:- ಇಲ್ಲೂ ಕೂಡ ಅದೇ ಆಗಿರಬೇಕು. ವಾಟಾಳ್ ನಾಗರಾಜ್ ಹೇಳಿದ್ದ ಕೆಲಸವನ್ನೂ ಆ ಮಾಲೀಕನು ಹೇಳಿದ್ದಾನೆ. ನಾನು ಬರುತ್ತೇನೆ, ನನ್ನನ್ನು ಅರೆಸ್ಟ್ ಮಾಡಬೇಡಿ ಎಂದು ಅವನು ಹೇಳಿದ್ದಾನೆ. ಅದೇ ಪ್ರಕಾರ ಇವರೂ ನಡೆದುಕೊಂಡಿದ್ದಾರೆ. ಇಲ್ಲೇನೂ ವ್ಯತ್ಯಾಸ ಇಲ್ಲ ಅದಕ್ಕೂ ಇದಕ್ಕೂ. ಅದೇ ವ್ಯತ್ಯಾಸವೇ?

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರೇ, ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ಈ ಸದನದಲ್ಲಿ ತಾವಾಗಲೀ ಮತ್ಯಾರೇ ಸದಸ್ಯರಾಗಲೀ ಒಂದು ವಿಚಾರವನ್ನು ಪ್ರಸ್ತಾಪಮಾಡುವ ಉದ್ದೇಶವೇನೆಂದರೆ ಅದಕ್ಕೊಂದು ಪರಿಹಾರವನ್ನು ಕಂಡುಹಿಡಿದುಕೊಳ್ಳಬೇಕು ಎಂದು ಹೇಳಿ. ಸರ್ಕಾರದವರು ತಮ್ಮ ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಏನು ಮಾಡಿದ್ದಾರೆ. ಎನ್ನತಕ್ಕಂಥದ್ದು, ಯಾವ ಹಂತ ತಲುಪಿದೆ ಎಂದು ಹೇಳಿದ್ದಾರೆ. ತಾವು ಸವಿಸ್ತಾರವಾಗಿ, ಆಗ್ರಹಪೂರ್ವಕವಾಗಿ ಎಲ್ಲಾ ವಿಚಾರವನ್ನು ಸಭೆಯ ಗಮನಕ್ಕೆ ತಂದಿದ್ದೀರಿ. ಏನೊ ಒಂದು ಹಂತ ಎಂದರೆ ಇನ್ನೊಂದು ಸ್ವಲ್ಪ ದಿವಸ ಕಾದು ನೋಡೋಣ. ನಮಗೆ ಕಾನೂನಿನ ಇಕ್ಕಟ್ಟು

ಇರುವುದರಿಂದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು, ಮಾನ್ಯ ಸಕ್ಕರೆ ಮಂತ್ರಿಗಳು ಹೇಳಿದಂತೆ ಅವರು ಹೋಗಿ ಒಂದು ಆರ್ಡರನ್ನು ತಂದಿರುವುದರಿಂದ, ಈಗ ಅದನ್ನೆಲ್ಲಾ ಬಿಡುಗಡೆ ಮಾಡಬೇಕಾಗಿದೆ. ಆಮೇಲೆ ಬನ್ನಿ. ಯೋಚನೆ ಮಾಡೋಣ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೇ, ಒಂದು ಸಣ್ಣ ಕ್ಲಾರಿಫಿಕೇಷನ್. ನಾನೂ ಕೂಡ ಅದರಲ್ಲಿ ಸಿಗ್ನೇಟರಿಯಾಗಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ನನಗೆ ಕೆಲವೊಂದು ಅನುಮಾನ ಬಂದಿದೆ. ಮೊದಲನೆಯದಾಗಿ ಅವರು ಹೇಳುತ್ತಾರೆ.

ಅಧ್ಯಕ್ಷರು:- ಸೊರಬ ತಾಲ್ಲೂಕಿನ ಪಟೇಲರ ಸಂಘದವರು ಬಂದಿದ್ದರು. ನಿಮ್ಮನ್ನು ಕಾಣುವುದಕ್ಕೆ ಹೇಳಿದ್ದೆ. ಬಂದಿದ್ದರಾ? ಸರಿ ಹೇಳಿ. ಕುಮಾರ್ ಬಂಗಾರಪ್ಪ ಇರಲಿಲ್ಲ. ಅದಕ್ಕೆ ಅವರ ಹತ್ತಿರ ಕಳುಹಿಸಿದ್ದೆ. ಹೇಳಿ.

ಶ್ರೀ ಆರಗ ಜ್ಞಾನೇಂದ್ರ:- ಬಂದಿದ್ದರು ಸಾರ್. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯವರು. ಮಾನ್ಯ ಆಹಾರ ಸಚಿವರು ನಮ್ಮ ಜಿಲ್ಲೆಯವರು. ಇಷ್ಟೊಂದು ದೊಡ್ಡ ಅಧಿಕಾರವನ್ನು ಹಿಡಿದಿರತಕ್ಕಂಥವರು ನಮ್ಮ ಜಿಲ್ಲೆಯವರಿರುವಾಗ ನಮ್ಮ ಜಿಲ್ಲೆಯ ಜನರಿಗೆ ಮೋಸವಾಗಬಾರದು ಎನ್ನುವಂಥದ್ದು ನಮ್ಮೆಲ್ಲರ ಅಭಿಲಾಷೆ. ಈಗ ಅವರ ಕಾಲದಲ್ಲಿ ಅವರ ಪೀರಿಯಡ್‌ನಲ್ಲಿ ನಮ್ಮ ಜಿಲ್ಲೆಯಲ್ಲಿ ರೈತರಿಗೆ ಮೋಸವಾಗುತ್ತಿದೆ. ಕಾರ್ಮಿಕರಿಗೆ ಮೋಸವಾಗುತ್ತಿದೆ. ಅವರು ಹೇಳುತ್ತಾರೆ, ಬಹಳ ಸುಲಭವಾಗಿ ಹೇಳಿದರು. ಎರಡನೇ ಸಾರಿ ಅಂಥ ಉತ್ತರವನ್ನು ಈ ಸದನದಲ್ಲಿ ಕೊಡುತ್ತಿರುವುದು. ತಾವೆಲ್ಲಾ ಹಿರಿಯರು. ಅವರೂ ಕೂಡ ತುಂಬಾ ಹಿರಿಯರು. ನಾವೆಲ್ಲಾ ಮೊದಲನೇ ಸಾರಿ ವಿಧಾನಸಭೆಗೆ ಬಂದಿರುವವರು. ಸರ್ಕಾರ ಯಾವುದ್ಯಾವುದಕ್ಕೆ ನಿಮಗೆ ಬೇಕು ಎಂದು ಕೇಳಿದರು. ಅಭಾವ ಬಂದಿದ್ದಕ್ಕೂ, ತೊಗರಿಬೆಳೆಗೆ ಹುಳ ಬಂದಿದ್ದಕ್ಕೂ ಸರ್ಕಾರ ಬೇಕೇ ಎಂದು ಕೇಳಿದರು. ಇಲ್ಲಿ ನಾಳೆ ಯಾರನ್ನಾದರೂ ತಲೆಯನ್ನು ಹೊಡೆದುಬಿಡುತ್ತಾರೆ. ದೊಣ್ಣೆ ಅವಂದು, ತಲೆ ಇವಂದು, ಸರ್ಕಾರದ್ದು ಏನು ಇದೆ ಅದರಲ್ಲಿ ಪಾತ್ರ ಎಂದು ಕೇಳಿಬಿಟ್ಟಾರು. ಏಕೆಂದರೆ ಜನರ ಮಾನ, ಪ್ರಾಣ ಇದನ್ನೆಲ್ಲಾ ಕಾಪಾಡಬೇಕಾದಂಥದ್ದು ಒಂದು ಸರ್ಕಾರ. ಅದರ ಜವಾಬ್ದಾರಿ ಇದೆ, ಆಸ್ತಿಯನ್ನು ಕಾಪಾಡಬೇಕಾದ ಜವಾಬ್ದಾರಿ ಇದೆ. ಆದರೆ ಈ ರೀತಿ ಉತ್ತರ ಕೊಟ್ಟುಬಿಟ್ಟರೆ ತಪ್ಪು ಸಿಗ್ನಲ್ ಹೊರಗಡೆ ಹೋಗುತ್ತದೆ. ಅಪರಾಧ ಮಾಡುವವರಿಗೆ ತಪ್ಪು ಸಿಗ್ನಲ್ ಹೋಗುತ್ತದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಅವರ ಮಾತನ್ನು ಸರಿಪಡಿಸಬೇಕು ಎಂದು ನನ್ನ ವಿನಂತಿ ಇದೆ. ಇನ್ನೊಂದು ಮಾನ್ಯ ಸಕ್ಕರೆ ಸಚಿವರು ಒಂದು ಮಾತನ್ನು ಹೇಳಿದರು, ಅವನು ತಮಿಳುನಾಡಿನಲ್ಲಿದ್ದಾನೆ, ಅರೆಸ್ಟ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಈ ಸಕ್ಕರೆ ಕಂಪನಿಗೆ, ನಮ್ಮ ರೈತರಿಗೆ ಮೋಸ ಮಾಡಿದವನು ತಮಿಳುನಾಡಿನಲ್ಲಿದ್ದಾನೆ, ವೀರಪ್ಪನ್ ತಮಿಳುನಾಡಿನ ಆಶ್ರಯ ಪಡೆದುಕೊಳ್ಳುತ್ತಿದ್ದಾನೆ, ಯಾರ್ಯಾರು ಈ ರೀತಿ ಕರ್ನಾಟಕಕ್ಕೆ ಚೀಟಿಂಗ್ ತಮಿಳುನಾಡಿನಲ್ಲಿದ್ದಾರೆನ್ನುವಂಥ ಮಾಹಿತಿಯನ್ನು ನಮಗೆ ದಯವಿಟ್ಟು ಕೊಡಬೇಕು.

ಅಧ್ಯಕ್ಷರು:- ನೀವು ಅಷ್ಟು ಹೇಳಿದರೆ ಈ ವಾಟಳರು ಇನ್ನೇನಾದರೂ ಹೇಳುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ:- ತಮಿಳುನಾಡಿನ ಸರ್ಕಾರ ಎಂದರೆ, ತಮಿಳುನಾಡಿನಲ್ಲಿ ಅವನು ಇರುವುದು ಎಂದರೆ ವಿದೇಶದಲ್ಲಿದ್ದಾನೆಯೇ? ವಿದೇಶದಲ್ಲಿರುವ ಅಪರಾಧಿಗಳನ್ನು ಹಿಡಿದು ಎಳೆದುಕೊಂಡು ಬರುತ್ತಿದ್ದಾರೆ. ಇಲ್ಲಿ ಏಕೆ ಮಾಡುವುದಕ್ಕಾಗುವುದಿಲ್ಲ? ದಯಮಾಡಿ ರೈತರು, ಕಾರ್ಮಿಕರು ಈ ರೀತಿ ಇದ್ದಾಗ ಮೈಂಡ್ ಅಪ್ಲೈ ಮಾಡಿ ಎಂದು ಮೂರು ವರ್ಷಗಳಿಂದಲೂ ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು:- ಮಾನ್ಯ ಜ್ಞಾನೇಂದ್ರರವರೇ, ಡಿಬೇಟ್ ನಡೆಯುವ ವೇಳೆಗೆ ಒಂದೊಂದು ಅಕ್ಷರ ಯಾರು ಏನು ಹೇಳುತ್ತಾರೆ ಎನ್ನುವುದನ್ನೂ ಗಮನಿಸುತ್ತಿರಬೇಕು. ಅವನನ್ನು ಅರೆಸ್ಟ್ ಮಾಡುವುದಿಲ್ಲ, ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿಲ್ಲ.

1.10 ಪಿ.ಎಂ

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಮಾಡುತ್ತಾರೆಂದು ಹೇಳಿ ಬಿಟ್ಟರೆ ನಾವು ಮುಗಿಸಿ ಬಿಡುತ್ತೇವೆ. ಸಾಯಂಕಾಲದವರೆಗೆ ತೆಗೆದುಕೊಂಡು ಹೋಗಬೇಕೆಂಬ ವಿಚಾರ ನಮ್ಮದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಈಗ ಒಂದು ವಾರದ ಕೆಳಗೆ ಸಭೆ ಕರೆದಿದ್ದರು. ಅದರಲ್ಲಿ ಚರ್ಚೆ ಆಯಿತು. ಆವತ್ತು ಮುಖ್ಯಮಂತ್ರಿಗಳೇ ಹೇಳಿದ್ದರು, ನನಗೆ ಇಷ್ಟು ದಿವಸದೊಳಗೆ ಬ್ಯಾಂಕಿನ ಅಭಿಪ್ರಾಯವನ್ನು ತಿಳಿಸಬೇಕು ಎಂದು ಹೇಳಿದ್ದಾರೆ. ಆ ಅಭಿಪ್ರಾಯವನ್ನು ನಿಮಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ತಿಳಿಸಿದ್ದಾರೆಯೇ ಹೇಗೆ? ಅವರ ತೀರ್ಮಾನದ ಪ್ರಕಾರ, ಅವರು ಮೂರು ದಿವಸದೊಳಗೆ ಅಭಿಪ್ರಾಯ ಕೊಡಬೇಕು ಎಂದು ಹೇಳಿದ್ದರು.

ಅಧ್ಯಕ್ಷರು:- ಅದನ್ನೇ ಹೇಳಿ ಬಿಡುತ್ತೇನೆ. 6.3.98 ರಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ಒಂದು ಪತ್ರ ಬರೆದು 3.38 ಕೋಟಿ ರೂಪಾಯಿಗಳನ್ನು ವೇವ್ ಆಫ್ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಈಗ ಹೊಸದಾಗಿ ಖರೀದಿ ಮಾಡಲಿಕ್ಕೆ ಬಂದಿರತಕ್ಕವರು ಈ ಸನ್ನಿವೇಶದಲ್ಲಿ ಅಗ್ರಿಮೆಂಟ್‌ಗೆ ಎಂಟರ್ ಆಗಿ ಕಬ್ಬು ಬೆಳೆಗಾರರಿಗೆ ಏನೇನು ರಿಲೀಫ್ ಕೊಡಬೇಕು ಮತ್ತು ಕಬ್ಬು ಬೆಳೆಗಾರರಿಗೆ ಕೊಡಬೇಕಾಗಿರತಕ್ಕ ಹಣವನ್ನು ವಾಪಸ್ ಕೊಡತಕ್ಕದ್ದು ಹಾಗೂ ಕಾರ್ಮಿಕರಿಗೆ ಕೊಡಬೇಕಾಗಿರತಕ್ಕ ಸವಲತ್ತು ಎಲ್ಲಾ all that will be arranged out of the new settlement. ಲೆಟರ್ ಬಂದಿದೆ. ನನಗೇನೆಂದರೆ ಎಲ್ಲಾ ಕರೆಸ್ಪಾಂಡೆನ್ಸ್ ಇಲ್ಲಿ ಏಕೆ ಬಿಚ್ಚಿಡುವುದು ಎಂದು ಹೇಳಿ ನಾನು ಸುಮ್ಮನೇ ಇದ್ದೆ.

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಇಷ್ಟು ದಿವಸದೊಳಗೆ ಸೆಟಲ್ ಮಾಡಬೇಕು ಎಂದು ಹೇಳಿದ್ದೀರಿ. ಈಗ ಬ್ಯಾಂಕಿನ ವತಿಯಿಂದ ಒಂದು ರಿಯಾಯಿತಿಯನ್ನು ಕೊಡಲು ಮುಂದೆ ಬಂದಿದ್ದಾರಲ್ಲಾ, ಆ ರಿಯಾಯಿತಿ ಒಪ್ಪಿಕೊಂಡಿದ್ದೀರಾ?

SRI J.H. PATEL:- If you really want to see that this problem is solved... I am not responsible for what has happened. ಸರ್ಕಾರ ಇದಕ್ಕೆ

ಕಾರಣ ಅಲ್ಲ. ಅವನ ಹೆಸರು ನನಗೆ ಗೊತ್ತಿಲ್ಲ. ತೀರ್ಥಹಳ್ಳಿ ಎಂಎಲ್ಎ ಮಾನ್ಯ ಜ್ಞಾನೇಂದ್ರ ಅವರು ಹೇಳಿದ ಹಾಗೆ, ಅವನ ತಲೆ ಇದೆ, ಇವನ ಹತ್ತಿರ ಕಲ್ಲು ಇದೆ, ನನಗೇನು ಗೊತ್ತು ಅವನು ಹೊಡೆಯಲಿ ಎಂದರು. ಹಾಗೆ ಅವನ ತಲೆ ಇದೆ, ಕಲ್ಲು ಇದ್ದರೆ ಹೊಡೆದುಕೊಳ್ಳಲಿ, ನನ್ನ ಅಭ್ಯಂತರ ಇಲ್ಲ. ಸರ್ಕಾರದ ಕರ್ತವ್ಯ ಏನು ಇದೆ, ಅದನ್ನು ಮೀರಿ ಈ ವಿಷಯದಲ್ಲಿ ರೈತರ ದೃಷ್ಟಿಯಿಂದ ಮಾತನಾಡಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ರೈತರ ಹತ್ತಿರ ಕಲ್ಲು ಇದೆ, ನಿಮ್ಮ ತಲೆಗೇ ಹೊಡೆದು ಬಿಟ್ಟಾರು. ತಯಾರಿ ಆಗುತ್ತಿದೆ. ರೈತರು, ಕಾರ್ಮಿಕರುಗಳ ಹತ್ತಿರ ಕಲ್ಲು ಇದೆ. ಆ ಭಯ ಇದೆ.

ಶ್ರೀ ಜೆ.ಹೆಚ್. ಪಟೇಲ್:- ಕಲ್ಲು ಹೊಡೆಯುವರನ್ನು, ತಲೆ ಹೊಡೆಯುವರನ್ನು ನಾನು ನೋಡಿದ್ದೇನೆ. ನಾನು ಹೇಳುವುದು ಕನ್ಸೇಷನ್ ಕೊಡುವುದಕ್ಕೆ ಆತ ಒಪ್ಪಿಕೊಂಡಿದ್ದಾನೆ, ಈಗ ಹೊಸದಾಗಿ ಖರೀದಿ ಮಾಡಿದವನಿಗೆ ಇನ್ನೇನೋ ಹೊಟ್ಟೆ ನೋವು ಆಗಿ ಬಿಟ್ಟು ಅವನನ್ನು ಕರೆದುಕೊಂಡು ಬಾ ಎಂದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಬ್ಯಾಂಕಿನವರು ರಿಯಾಯಿತಿ ಕೊಟ್ಟಿದ್ದಾರೆ. ಈಗ ಕೊಟ್ಟಿರುವ ರಿಯಾಯಿತಿಯನ್ನು ಹೊಸ ಮ್ಯಾನೇಜ್‌ಮೆಂಟ್‌ನವರು ಒಪ್ಪಿಕೊಂಡಿದ್ದಾರಾ? ಅವರು ಮಾಡುತ್ತಾರೆ ಅದಕ್ಕೆ?

ಶ್ರೀ ಜೆ.ಎಚ್. ಪಟೇಲ್:- ಅವರು ಈ ಕನ್ಸೇಷನ ಕೊಟ್ಟರೆ ಒಪ್ಪಿಕೊಳ್ಳುತ್ತೇವೆಂದು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ:- ಒಪ್ಪಿಕೊಳ್ಳುವುದಕ್ಕೆ ಹೇಳಿ.

ಶ್ರೀ ಜೆ.ಎಚ್. ಪಟೇಲ್:- ಅದನ್ನು ಹೇಳುತ್ತೇವೆ.

(ಗೊಂದಲ)

ಅಧ್ಯಕ್ಷರು:- 6.3.98ಕ್ಕೆ ಬ್ಯಾಂಕಿನವರು ಬರೆದಿರತಕ್ಕ ಪತ್ರ. ಇವತ್ತು 16ನೇ ತಾರೀಖು ಅಷ್ಟಷ್ಟು ವೇಗದಲ್ಲಿ ನಡೆದು ಹೋಗುತ್ತದೆಯೇ? ಈಗ ಹೊಸ ಮ್ಯಾನೇಜ್‌ಮೆಂಟ್ ಇದೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದರು. ಬ್ಯಾಂಕಿನವರಿಂದ ಇದು ಆಗಿದೆ, ನೀವು ಮೂರು ದಿವಸದೊಳಗೆ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಿದ್ದರು. ಆದರೂ ಅವರು ಲೇಟ್ ಮಾಡಿದರು. ನಾವು ಮೂರು ದಿವಸಕ್ಕೆ ಮಾಡುವುದಕ್ಕೆ ಆಗುವುದಿಲ್ಲ. ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್ ಆಗಬೇಕೆಂದು ಹೇಳಿದರು. ಈಗ ಮೂರು ದಿವಸ ಹೋಗಿ ಎಂಟು ದಿವಸ ಆಗಿದೆ. ಈಗ ಬ್ಯಾಂಕಿನವರಿಂದ ಬಂದಿದೆ.

ಶ್ರೀ ಜೆ.ಎಚ್. ಪಟೇಲ್:- ಈಗ ತೆಗೆದುಕೊಳ್ಳತಕ್ಕವನು ಈ ಕನ್ಸೆಷನ್ ಕೊಟ್ಟರೂ ತೆಗೆದುಕೊಳ್ಳುವುದಿಲ್ಲ ಎಂದರೆ ನೀವು ತೆಗೆದುಕೊಳ್ಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ:- ಅದು ನಿರ್ಧಾರ ಆಗಲೀ, ಮುಂದೇನು ಮಾಡಬಹುದು ಎಂದು ನೋಡೋಣ. ಅವನು ಆಗುವುದಿಲ್ಲ ಎಂದು ಹೇಳಿ ಬಿಡಲಿ, ಮುಂದೆ ಏನು ಆಗುತ್ತದೋ ನೋಡೋಣ.

SRI J.H. PATEL:- I will not undertake to do anything unless the party agrees.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಹೊಸ ಮ್ಯಾನೇಜ್‌ಮೆಂಟ್‌ನವರು ಈ ರಿಯಾಯಿತಿಗೆ ಸಿದ್ಧರಿಲ್ಲ ಎಂದರೆ ಮುಂದೇನು ಮಾಡಬೇಕು ಎಂದು ಕುಳಿತು ಆಲೋಚನೆ ಮಾಡೋಣ ಎಂದು ನಾವು ಹೇಳುವುದು. ಈಗ ಒಂದು ವಿಚಾರ ಹೇಳುತ್ತೇನೆ. ಈಗ ನಮ್ಮ ಶಿವಮೊಗ್ಗ ಜಿಲ್ಲೆಗೆ ಏನು ಗ್ರಹಚಾರ ಬಂದಿದೆಯೋ ನಮಗೆ ಗೊತ್ತಿಲ್ಲ. ಈಗ ನೀವು ನಮ್ಮನ್ನೂ ಬಿಟ್ಟು ಆ ಕಡೆ ದಾವಣಗೆರೆಗೆ ಸೇರಿದ್ದೀರಿ. ದಾವಣಗೆರೆಯಂತಹ ಒಂದು ಊರಿನಲ್ಲಿ ಎರಡೆರಡು ಷುಗರ್ ಕಂಪನಿಗಳು ಬರುವುದಕ್ಕೆ ಸಾಧ್ಯ ಇದೆ. ನಮ್ಮಲ್ಲಿ ಷುಗರ್ ಫ್ಯಾಕ್ಟರಿ ಇರುವುದನ್ನು ಮುಚ್ಚುವುದಕ್ಕೆ ಹೋಗುತ್ತಿದ್ದೇವೆ. ಇದು ನಮಗೆ ಆಗುತ್ತಿರತಕ್ಕಂಥ ತೊಂದರೆ. ದಯವಿಟ್ಟು ಹೊಸ ಮ್ಯಾನೇಜ್‌ಮೆಂಟ್‌ನವರು ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲದಿದ್ದರೆ ತಿಳಿಸಿ. ನಮಗೊಂದು ಯೋಚನೆ ಇದೆ. ನಿಮಗೆ ಹೊಸ ಮ್ಯಾನೇಜ್‌ಮೆಂಟ್‌ನವರು ಏನು ಹೇಳಿದ್ದಾರೆ, ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆಯೇ ಈ ರಿಯಾಯಿತಿಯನ್ನು ಒಪ್ಪಿಕೊಂಡು ಅದನ್ನಾದರೂ ಬೇಗ ಮಾಡಿಸಿ ಎಂದು ನಾವು ಹೇಳುವುದು.

ಅಧ್ಯಕ್ಷರು:- ಅದೇ ಪ್ರಯತ್ನದಲ್ಲಿದ್ದೇವೆಂದು ತಾನೇ ಅವರು ಹೇಳಿದ್ದುದು.

ಶ್ರೀ ಕೆ.ಎಸ್. ಈಶ್ವರಪ್ಪ:- ಅದನ್ನು ಸ್ಪಷ್ಟ ಮಾಡಿ ಬಿಡಲಿ, ಯಾವಾಗ ಏನು ಎಂದು ಹೇಳಲಿ. ಒಂದು ತಿಂಗಳಲ್ಲಿ, ಎರಡು ತಿಂಗಳಲ್ಲಿ ಮುಗಿಸುತ್ತಾರೋ ಹೇಳಲಿ. ಯಾವಾಗ ಮಾಡುತ್ತಾರೆ ಎಂಬುದನ್ನು ಹೇಳಲಿ.

ಶ್ರೀ ಜೆ.ಎಚ್. ಪಟೇಲ್:- ನಾನು ಯಾವುದೇ ಅಂಡರ್‌ಟೇಕಿಂಗ್ ಮಾಡುವುದಿಲ್ಲ. ಅವನು ಹೊಸ ಕಂಪನಿಯವನು ಕೊಂಡು ನಡೆಸುವುದಾದರೆ ಸರ್ಕಾರ ಅವನಿಗೆ ಎಲ್ಲಾ ರೀತಿಯ ಸವಲತ್ತು ಕೊಡುತ್ತದೆ. ಇಲ್ಲದೇ ಹೋದರೆ ಈಗೇನು ಆರ್ಡಿನೆನ್ಸ್ ಇದೆ ಅದನ್ನು ಇಷ್ಯೂ ಮಾಡಿ ಗವರ್ನ್‌ಮೆಂಟ್ ಅದನ್ನು ತೆಗೆದುಕೊಳ್ಳುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ಅದನ್ನಾದರೂ ಮಾಡಿ, ಅಷ್ಟನ್ನೇ ನಾವು ಕೇಳುವುದು.

ಶ್ರೀ ಜೆ.ಎಚ್. ಪಟೇಲ್:- ಅಷ್ಟನ್ನು ನಾವು ಮಾಡುತ್ತೇವೆ. ಅದಕ್ಕೆ ಮೇ 30ನೇ ತಾರೀಖಿನೊಳಗೆ ಮಾಡುತ್ತೇವೆಂದಲ್ಲ. ಮೇ 30 ತಾರೀಖು ಆಗಬಹುದು, ಅದು 2003ನೇ ಇಸವಿ ಆಗಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ:- ಸರ್ಕಾರದ ಬೇಜವಾಬ್ದಾರಿ ಹೇಳಿಕೆಯನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.